# ನಂಬಿಕೆಯ ನೂಲು

## ಮತ್ತೆ ಮರುಕಳಿಸುವುದೇ ದೇವಪ್ಪನ ಚಾದಂಗಡಿ ವೈಭವ?

■ ಬಸು ಬೇವಿನಗಿಡದ

ಕಲೆ: ಎಚ್.ಎಸ್. ಮೋನಪ್ಪ

ಒಬ್ಬರಿಲ್ಲದಿದ್ದರೆ ಇನ್ನೊಬ್ಬರು ಎಲ್ಲ ಮನೆಗಳಲ್ಲಿ ಅಸುನೀಗಿಲ್ಲವೆ? ಕೆಟ್ಟ ಶಕುನವೆಂದು ಇಡೀ ಊರಿಗೆ ಮೃತ್ಯುವನ್ನು ಅನ್ವಯಿಸಿದರೆ ಹೇಗೆ? ಎಲ್ಲರ ಮನೆಗಳಲ್ಲಿ ಜಗಳ ಇರುವುದಿಲ್ಲವೆ? ಅಣ್ಣ ತಮ್ಮಂದಿರ ಮಧ್ಯೆ ಹೊಡೆದಾಟ ನಡೆದಿಲ್ಲವೆ? ಯುದ್ಧಭೂಮಿಯಲ್ಲಿಯೆ ಶಾಂತಿ ಬೋಧಿಸಲಿಲ್ಲವೆ? ಕಾಕಾನ ಮಾತುಗಳು ಅನೇಕರಿಗೆ ಹೌದಲ್ಲ ಎನಿಸಿದವು. ದೇವಣ್ಣನ ಮನ ಒಲಿಸಬೇಕು. ಆತ ಅಷ್ಟೂ ಮೀರಿ ಒಲ್ಲೆಯೆಂದು ಅದನ್ನು ಮಾರಲು ಇಚ್ಛಿಸಿದರೆ ಬೇರೆ ಯಾರಾದರೂ ಅಲ್ಲಿ ಹೊಟೇಲ್ ನಡೆಸಬಹುದು. ಹೊಂಗಲದವರೆ ಹಿಂದೆ ಒಬ್ಬರು ಬಂದು ಕೇಳಿಹೋಗಿದ್ದರು. ದೇವಪ್ಪನನ್ನು ಕರೆದುಕೊಂಡು ಬರುವ ಜವಾಬ್ದಾರಿ ಕಾಕಾನದು. ದೇವಪ್ಪ ಮಾತ್ರವೆ ಅದನ್ನು ನಡೆಸಬಲ್ಲ ಎನ್ನುವುದು ಅವನ ನಂಬಿಕೆ. ಬೇರೆಯವರು ಅದನ್ನು ನಡೆಸಿಕೊಂಡು ಹೋಗಲು ಅಷ್ಟು ಸುಲಭವಾಗಿ ಮನಸ್ಸು ಮಾಡುವುದಿಲ್ಲ. ಏಕೆಂದರೆ ಮಂದಿಗೆ ಹಿಡಿದುಕೊಂಡಿರುವ ಕಂಡಕ್ಟರನ ದೆವ್ವ ಇನ್ನೂ ಬಿಟ್ಟಿರಲಿಲ್ಲ! ಆದರೆ ಎಲ್ಲ ಕೆಲಸಗಳು ತಾವು ಅಂದುಗೊಂಡಂತೆ ನಡೆಯಲಾರವು.

ಕಾಕಾನಿಗೆ ದೇವಣ್ಣ ಹೊಂಗಲದ ಹೊಟೇಲಿನಲ್ಲಿ ಆಗಿಂದಾಗ ಭೆಟ್ಟಿಯಾಗುತ್ತಿದ್ದ. ಹಾಗೆ ಒಂದೆರಡು ಸಲ ಕಾಕಾ ಸುಮ್ಮನೆ ತೇಲಿಸುವಂತೆ ಈ ಸುದ್ದಿ ತೆಗೆದ. ಆದರೆ ದೇವಣ್ಣನ ಉತ್ತರ ಮಾತ್ರ ಅನಿರೀಕ್ಷಿತವಾಗಿತ್ತು. ‘ಕಾಕಾ, ದಯವಿಟ್ಟು ಆ ಸುದ್ದಿ ತಗೀಬ್ಯಾಡ. ನಾನು ಹೊಳ್ಳಿ ಊರಿಗೆ ಬರಂಗಿಲ್ಲ. ಬರಂಗಿಲ್ಲಂದ್ರ ಬರಂಗಿಲ್ಲ! ಆ ಹೊಟೇಲು, ಹೊಲ ಐತೆಲ್ಲ ಅದನ್ನು ಮಾರಬೇಕಂತ ಮಾಡೇನಿ. ನಮ್ಮೂರು ಸಿಂದೋಗಿಯೊಳಗ ಸ್ವಲ್ಪ ಜಮೀನು ನೋಡ್ರಿ ಅಂತ ಅವ್ವಗ ಹೇಳಿ ಇಟ್ಟೇನಿ.’ ದ್ಯಾವಣ್ಣ ಯಾಕೋ ಬಹಳ ಬೇಸರ ಮಾಡಿಕೊಂಡಿದ್ದಾನೆಂದು ದುಂಡಪ್ಪ ಒಂದಷ್ಟು ದಿನ ಸುಮ್ಮನಾದ. ಆದರೆ ದುಂಡಪ್ಪ ಒಂದು ಕೆಲಸ ಹಿಡಿದರೆ ಅದನ್ನು ದಂಡೆ ಮುಟ್ಟಿಸದೆ ಬಿಡುವವನಲ್ಲ. ಅವನು ದೇವಪ್ಪನಿಗೆ ಯಾವುದೆ ಸೂಚನೆ ಕೊಡದೆ ಒಂದು ದಿನ ಸಿಂದೋಗಿಗೆ ಹೋದ. ಶಿವವ್ವ ಅವನಿಗೆ ಹೊರತಾದವಳಲ್ಲ. ಹಿಂದೆ ಆಕೆ ಮಲ್ಲೂರಿನಲ್ಲಿದ್ದಾಗ ದುಂಡಪ್ಪಕಾಕಾನ ಕಿವಿಗೆ ಹಾಕದೆ ಏನೊಂದೂ ಮಾತಾಡಿದವಳಲ್ಲ, ಯಾವೊಂದೂ ಕೆಲಸ ಮುಂದಾಗಿ ಮಾಡಿದವಳಲ್ಲ. ತಾಯಿಯ ಮನಸ್ಸು ತಿದ್ದಿದರೆ ಮಗನ ಮನಸ್ಸನ್ನು ಆರಾಮಾಗಿ ತಿದ್ದಬಹುದೆಂದು ಕಾಕಾನ ಊಹೆ. ಚಹಾಗಿಹಾ ಕುಡಿದಾದ ಮೇಲೆ ಕಾಕಾ ಸಾವಕಾಶ ಮಾತಿಗಿಳಿದ. ದೇವಪ್ಪ ಮತ್ತೆ ಮಲ್ಲೂರಿಗೆ ಮರಳುವುದರಿಂದ ಆತ ಬೇಕಾಬಿಟ್ಟಿ ದರದಲ್ಲಿ ಹೊಲಮನೆ ಮಾರುವುದು ತಪ್ಪುತ್ತದೆ. ಮೇಲಾಗಿ ದೇವಪ್ಪನದಾಗಲಿ, ತಾಯಿಯದಾಗಲಿ ಯಾರದೂ ತಪ್ಪಿಲ್ಲ. ಸಾವುನೋವು ಇಲ್ಲದ ಮನೆ ಇರುತ್ತದೆಯೆ? ಪೂಜೆ ಮಾಡಿ ಮತ್ತೆ ಹೊಟೇಲು ಆರಂಭಿಸಿದರಾಯಿತು.

ಊರಿನ ಮಂದಿಯ ಸಹಕಾರ ಕೊಡಿಸುವುದು ತನ್ನ ಜವಾಬ್ದಾರಿ. ‘ಶಿವಕ್ಕ, ನಿನಗ ಇಷ್ಟೊತ್ತೂ ಹೇಳಿದ್ದು ನನ್ನ ಮಾತು. ಈಗ ಇನ್ನೊಬ್ಬರ ಮಾತು ಹೇಳ್ತೇನಿ, ಕೇಳು. ಗಿಣಿಮೂಗಿನ ಗಿರಿಯಪ್ಪ ಅಂದ್ರ ನಿನಗ ಬಾಳ ನಂಬಿಕಿ. ಹೌದಲ್ಲೋ? ಮೊನ್ನಿ ಅಂವ

